ವಿಜಯ ಕರ್ನಾಟಕ

### ಮಾಜಿ ಐಪಿಎಸ್ ಅಧಿಕಾರಿ ಕಿರಣ್ ಬೇಡಿ ಸಲಹೆ

# ವಿಕಲಚೇತನರಿಗೂ ಉದ್ಯೋಗ ನೀಡಿ

**ವಿಕ ಸುದ್ದಿಲೋಕ** ಬೆಂಗಳೂರು

ವಿಕಲಚೇತನರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ ಸಂಸ್ಥೆಗಳು ತಮ್ಮ ಮನೋಸ್ಥಿತಿಯನ್ನು ಬದಲಿಸಿಕೊಳ್ಳಬೇಕಿದೆ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್ ಬೇಡಿ ಅಭಿಪ್ರಾಯಪಟ್ಟರು.

'ಸ್ಯಾಪ್ ಲ್ಯಾಬ್ಸ್' ಆಯೋಜಿಸಿರುವ 'ಇಂಡಿಯಾ ಇಂಕ್ಲ್ಯೂಸಿವ್ ಸಮಿತ್'ನಲ್ಲಿ ಪಾಲ್ಗೊಳ್ಳುವ ಸಲುವಾಗಿ ನಗರಕ್ಕೆ ಆಗಮಿಸಿದ ಅವರು ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿ '' ವಿಕಲಚೇತನರ ಜತೆ ಕೆಲಸ ಮಾಡುತ್ತಿರುವ ಸಾಕಷ್ಟು ಸ್ವಯಂಸೇವಾ ಸಂಸ್ಥೆಗಳಿವೆ. ಅದೇ ವೇಳೆ ಕಾರ್ಪೊರೇಟ್ ಸಂಸ್ಥೆಗಳೂ ತಮ್ಮ ವಾರ್ಷಿಕ ಲಾಭದಲ್ಲಿ ಶೇ. 2ರಷ್ಟನ್ನು ಸಾಮಾಜಿಕ ಹೊಣೆಗಾರಿಕೆಗಾಗಿ ಖರ್ಚು ಮಾಡಬೇಕು ಎನ್ನುವ ಕಾನೂನು ಇದೆ. ಅದೇ ಹಣದಲ್ಲಿ ವಿಕಲಚೇತನರಿಗಾಗಿ ಉದ್ಯೋಗಗಳನ್ನು ಸೃಷ್ಟಿಸುವುದು ಸಾಧ್ಯವಿದೆ. ಇದಕ್ಕೆ ಆ ಕ್ಷೇತ್ರದಲ್ಲಿ ನೈಪುಣ್ಯತೆ ಸಾಧಿಸಿರುವ ಸ್ವಯಂಸೇವಾ ಸಂಸ್ಥೆಗಳನ್ನು ಬಳಸಿಕೊಳ್ಳಬಹುದು,'' ಎಂದು ಸಲಹೆ ನೀಡಿದರು.

ಸ್ಯಾಪ್ ಲ್ಯಾಬ್‌ನ ಹಿರಿಯ ಉಪನಿರ್ದೇಶಕ ವಿ. ಆರ್. ಫಿರೋಜ್ ಮಾತನಾಡಿ ''ಈ ಬಾರಿಯ ಸಮ್ಮೇಳನದಲ್ಲಿ ಸುಮಾರು 700 ಮಂದಿ ಪಾಲ್ಗೊಳ್ಳಲಿದ್ದಾರೆ. ಕಳೆದ ವರ್ಷ ಸಮ್ಮೇಳನ ಸಂದರ್ಭದಲ್ಲಿ 12 ಲಕ್ಷ ರೂ. ಸಂಗ್ರಹಿಸಲಾಗಿತ್ತು. ಇದನ್ನು ವಿಕಲಚೇತನರ ಏಳ್ಗೆಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗಿದೆ. ಈ ಬಾರಿ 27 ಲಕ್ಷ ರೂಪಾಯಿ ಸಂಗ್ರಹವಾಗುವ ನಿರೀಕ್ಷೆ ಇದೆ. ಇದರಲ್ಲಿ ಬೆಂಗಳೂರು ಮೂಲದ ಎಂಟು ಕಾರ್ಪೊರೇಟ್ ಕಂಪನಿಗಳೇ ಸುಮಾರು 10 ಲಕ್ಷ ರೂಪಾಯಿಗಳನ್ನು ನೀಡುತ್ತಿವೆ,'' ಎಂದರು.

''ಅಂತಾರಾಷ್ಟ್ರೀಯ ಜನಸಂಖ್ಯೆಯಲ್ಲಿ ಶೇ. 15ರಷ್ಟು ಮಂದಿ ವಿಕಲಚೇತನರು ಹಾಗೂ ಬುದ್ಧಿಮಾಂದ್ಯರು ಇದ್ದಾರೆ. ಆದರೆ, ನಮ್ಮ ದೇಶದ ಅಂಕಿ ಅಂಶಗಳ ಪ್ರಕಾರ ಶೇ. 5ರಷ್ಟು ಜನ ಮಾತ್ರವೇ ಈ ವರ್ಗಕ್ಕೆ ಸೇರಿದವರು ಎನ್ನಲಾಗುತ್ತಿದೆ. ಇದರರ್ಥ ನಮ್ಮಲ್ಲಿನ್ನೂ ಸರಿಯಾಗಿ ಗಣತಿ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ವಿಕಲಚೇತನರ ಕುರಿತು ನಿಖರ ಮಾಹಿತಿ ಸಂಗ್ರಹಿಸುವ ಕೆಲಸ ಆಗಬೇಕಿದೆ,'' ಎಂದರು. ಇಂಡಸ್‌ಇಂಡ್ ಬ್ಯಾಂಕ್‌ನ ಮ್ಯಾನೇಜರ್ ಸಿದ್ಧಾರ್ಥ ಜಯಕುಮಾರ್ ಉಪಸ್ಥಿತರಿದ್ದರು.

### ಎಲ್ಲಾ ಕಡೆ ತೇಜ್‌ಪಾಲ್‌ಗಳಿದ್ದಾರೆ

**ಜೈನ್ ಮಹಿಳಾ ಕಾಲೇಜಿನಲ್ಲಿ ಶುಕ್ರವಾರ ಬೆಳಗ್ಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಕಿರಣ್ ಬೇಡಿ ''ಎಲ್ಲಾ ಕಚೇರಿಗಳಲ್ಲೂ ತೇಜ್‌ಪಾಲ್‌ಗಳಿದ್ದಾರೆ. ಇದರಿಂದ ತಪ್ಪಿಸಿಕೊಳ್ಳಲು ಹೆಣ್ಣು ಮಕ್ಕಳಿಗೆ ವಿಶೇಷ ಮಾಹಿತಿ ನೀಡಬೇಕು. ಅದೇ ವೇಳೆ, ಪುರುಷ ಸಹೋದ್ಯೋಗಿಗಳಲ್ಲೂ ಸೂಕ್ಷ್ಮತೆ ಬೆಳೆಸಬೇಕು. ಹೆಣ್ಣು ಮಕ್ಕಳೂ ಹುಡುಗರಿಗೆ ಇರುವ ಎಲ್ಲಾ ಸ್ವಾತಂತ್ರ್ಯ ಅನುಭವಿಸುವಂತಾಗಬೇಕು. ಅದು ಅವರ ಹಕ್ಕು ಎಂಬುದನ್ನು ಅವರಿಗೆ ಅರ್ಥ ಮಾಡಿಸಬೇಕು,'' ಎಂದರು.**

ವಿಕ ಚಿತ್ರಲೋಕ



**ಬೆಂಗಳೂರಿನ ಜೆಪಿ ನಗರದಲ್ಲಿರುವ ಜೈನ್ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳಿಗೆ ಮಹಿಳಾ ಸಬಲೀಕರಣ ದ ಕುರಿತು ಶುಕ್ರವಾರ ಉಪನ್ಯಾಸ ನೀಡುವ ಮುನ್ನ ಮಾತುಕತೆಯಲ್ಲಿ ತೊಡಗಿದ್ದ ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್ ಬೇಡಿ.**